**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ**
**ಘನ ನ್ಯಾಯಾಲಯದಲ್ಲಿ**
**ಪ್ರಕರಣ ಸಂಖ್ಯೆಃ ಎಸ್.ಸಿ *6/2020***

ದಿನಾಂಕಃ *07.11.2022*
*(ಸಾಕ್ಷಿಗೆ ಪ್ರಮಾಣ* **ಮಾಡಿಸಲಾಯಿತು)**

ಪ್ರಾ.ಸಾಃ *4* *(ಚಾ.ಸಾ.1)*

| | | |
|---|---|---|
| ಹೆಸರು | ಃ | ಪ್ರಕಾಶ |
| ತಂದೆಯ ಹೆಸರು | ಃ | ಸೇವ್ಯಾನಾಯಕ |
| ವಯಸ್ಸು | ಃ | *38* ವರ್ಷ |
| ಉದ್ಯೋಗ | ಃ | ಚಿಕನ್ ಅಂಗಡಿ |
| ವಾಸ ಸ್ಥಳ | ಃ | **ದೊಡ್ಡೇರಿ ಕಾಲೋನಿ** |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

ಚಾಸಾ.*2* – ಕುಮಾರ ಮತ್ತು ಚಾಸಾ.*3* – ಲಕ್ಷ್ಮಣ ನನ್ನ ಸಹೋದರರು. ಆರೋಪಿ ನನ್ನ ಚಿಕ್ಕಪ್ಪ - ರಾಮನಾಯಕರವರ ಮಗ.

*2.* ಸರ್ವೆ ನಂ.*59* ರಲ್ಲಿ *5* ಎಕೆರೆ ನನ್ನ ತಾತ - ಮೋಟಾ ಸೋಮ್ಯನಾಯಕರವರಿಗೆ ಮಂಜೂರಾಗಿತ್ತು. ಅವರು ತೀರಿಕೊಂಡಿದ್ದಾರೆ. ಅವರ ನಂತರ ನನ್ನ ತಂದೆ ಮತ್ತು ನನ್ನ ಚಿಕ್ಕಪ್ಪ – ರಾಮನಾಯಕ ತಲಾ ಅರ್ಧ ಅರ್ಧ ಸಾಗುವಳಿ ಮಾಡುತ್ತಿದ್ದರು. ನನ್ನ ತಂದೆ ಮತ್ತು ರಾಮನಾಯಕ ತೀರಿಕೊಂಡಿದ್ದಾರೆ. ಅವರ ನಂತರ ನಾವು ಮತ್ತು ರಾಮನಾಯಕರವರ ಮಕ್ಕಳು ನಮ್ಮ ನಮ್ಮ ಬಾಲಿನ ಜಮೀನನ್ನು ಸಾಗುವಳಿ ಮಾಡುತ್ತಿದ್ದೆವು.

*3.* ತಾಃ *04.08.2019* ರಂದು ಬೆಳಿಗ್ಗೆ *8* ಗಂಟೆಗೆ ನಾನು, ನನ್ನ ಸಹೋದರರಾದ ಲಕ್ಷ್ಮಣ ಮತ್ತು ಕುಮಾರ ಜಮೀನಿನಲ್ಲಿ ಕಳೆ ಕೀಳಲು ಹೋಗಿದ್ದೆವು. ನಾವು ಕಳೆ ತೀರುವಾಗ ಬೆಳಿಗ್ಗೆ *10* ಗಂಟೆಯಲ್ಲಿ ಆರೋಪಿ ಕಾರಿನಲ್ಲಿ ಬಂದನು. ಬಂದೂಕು ಹಿಡಿದುಕೊಂಡು ಆರೋಪಿ ಬಂದು ಗುಂಡು ಹಾರಿಸಿದನು. ಆಗ ನಾವು ಓಡಿ ಹೋಗುತ್ತಿರುವಾಗ ಆರೋಪಿ ಶೂಟ್ ಮಾಡಿದ ಗುಂಡು ನನ್ನ ಅಣ್ಣ –

ಕುಮಾರನ ಬಲ ತೊಡೆಗೆ ಬಂದು ತಾಗಿ ಪಾರಾಗಿ ಎಡತೊಡೆಗೆ ಸವರಿಕೊಂಡು ಹೋಯಿತು.

*4.* ನನ್ನ ಅಣ್ಣ - ಕುಮಾರನಿಗೆ ರಕ್ತಗಾಯವಾಗಿ ಕೆಳಗೆ ಬಿದ್ದನು. ರಕ್ತಸ್ರಾವವಾಗುತ್ತಿತ್ತು. ನಾನು ಮತ್ತು ಚಾಸಾ.*3* ನಮ್ಮ ಅಣ್ಣ ಕುಮಾರ ಬಳಿ ಹೋದಾಗ ಆರೋಪಿ ಬಂದೂಕು ಬಿಸಾಡಿ ಹೊರಟು ಹೋದನು. ಬಂದೂಕು ಬಿಸಾಡಿದ್ದರಿಂದ ಬಂದೂಕು ಮುರಿದು ಹೋಗಿತ್ತು. ನಿಮ್ಮನ್ನು ಯಾರನ್ನೂ ಬಿಡುವುದಿಲ್ಲವೆಂದು ಬೆದರಿಕೆ ಹಾಕಿ ಆರೋಪಿ ಹೊರಟು ಹೋದನು.

*5.* ನಂತರ ನನ್ನ ಅಣ್ಣನ್ನು ಅಂಬುಲೈನ್ಸ ತರಿಸಿ ಆರ್ ಆರ್ ಆಸ್ಪತ್ರೆಗೆ ಚಾಸಾ.*3* ದಾಖಲು ಮಾಡಿದರು.

*6.* ನನ್ನ ನನ್ನ ಅಣ್ಣ – ಕುಮಾರ ಬನಿಯನ್, ಟೀ ಶರ್ಟ್, ಲುಂಗಿ, ಅಂಡರ್‌ವೇರ್ ಧರಿಸಿದ್ದನು. ಟೀ ಶರ್ಟ್ ಮತ್ತು ಅಂಡರ್‌ವೇರ್‌ಗೆ ರಕ್ತವಾಗಿತ್ತು. ಅಂಡರ್‌ವೇರ್ ಜೇಬಿನಲ್ಲಿದ್ದ ಮೊಬೈಲ್ ಒಡೆದು ಹೋಗಿತ್ತು. ಸದರಿ ಬಟ್ಟೆಗಳು, ಬಂದೂಕು ಮತ್ತು ಮೊಬೈಲ್ ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಗುರುತಿಸಿದ ಟೀ ಶರ್ಟ್, ಅಂಡರ್‌ವೇರ್, ಬಂದೂಕು ಮತ್ತು ಮೊಬೈಲ್‌ಗಳನ್ನು ಈಗಾಗಲೇ ಎಂ.ಓ.*1* ರಿಂದ ಎಂ.ಓ.*4* ಎಂದು ಗುರುತಿಸಲಾಗಿದೆ.

*7.* ಬೆಳಿಗ್ಗೆ *11* ಗಂಟೆಗೆ ತಾವರಕೆರೆ ಠಾಣೆಗೆ ಹೋಗಿ ದೂರು ನೀಡಿದ್ದೇನೆ. ಸಾಕ್ಷಿ ಗುರುತಿಸಿದ ದೂರನ್ನು ಈಗ ನಿಪಿ.*4* ಎಂತಲೂ ಸಾಕ್ಷಿಯ ಸಹಿಯನ್ನು ಈಗ ನಿಪಿ.*4(ಎ)* ಎಂದು ಗುರುತಿಸಲಾಯಿತು.

*8.* ನಾನು ದೂರು ನೀಡಿದ ನಂತರ ಪೊಲೀಸರು ಮಧ್ಯಾಹ್ನ *2* ಗಂಟೆಯಿಂದ *3.30* ಗಂಟೆಯವರೆಗೆ ನಾನು ಸ್ಥಳ ತೋರಿಸಿ ಘಟನೆ ವಿವರಿಸಿ ಹೇಳಿದ ಪ್ರಕಾರ ಪೊಲೀಸರು ಪಂಚರಾದ ಚಾಸಾ.*4* ಮತ್ತು ಚಾಸಾ.*5* ರವರ ಸಮಕ್ಷಮ ಸ್ಥಳ ಮಹಜರ ಮಾಡಿ *1.* ಬಂದೂಕು, *2.* ಫೈರ್ ಆಗಿರುವ *2* ಕಾರ್ಟೇಜ್‌ಗಳು, *3.* ಲೈವ್ ಕಾರ್ಟೇಜ್, *4.* ರಕ್ತವಾದ ಮಣ್ಣು, *5.* ರಕ್ತವಾದ ಕಲ್ಲು, *6.* ಸಾದಾ ಮಣ್ಣು, *7.*ನೋಕೀಯಾ ಮೊಬೈಲ್, *8.* ಬಂದೂಕಿನ ಪ್ಯಾಡ್, *9.* ಇನ್ನೊಂದು ಪ್ಯಾಡ್, *10.*ಕುಮಾರನ ಒಂದು ಜೊತೆ ಚಪ್ಪಲಿಗಳನ್ನು ವಶಪಡಿಸಿಕೊಂಡರು. ಸಾಕ್ಷಿ

ಗುರುತಿಸಿದ ಮಹಜರನ್ನು ಈಗ ನಿಪಿ.*5* ಎಂತಲೂ ಸಾಕ್ಷಿಯ ಸಹಿಯನ್ನು ಈಗ ನಿಪಿ.*5*(ಎ) ಎಂದು ಗುರುತಿಸಲಾಯಿತು.

***(ಸೀಲಾದ ಬಟ್ಟೆಯ ಚೀಲಗಳನ್ನು ತೆರೆದ ನ್ಯಾಯಾಲಯದಲ್ಲಿ ತೆರೆಯಲಾಯಿತು.)***

ಅದರಲ್ಲಿದ್ದ ಸಾಕ್ಷಿ ಗುರುತಿಸಿದ ಬಂದೂಕ ಮತ್ತು ಮೊಬೈಲ್‌ನ್ನು ಈಗಾಗಲೇ ಎಂ.ಒ.*3* ಮತ್ತು ಎಂ.ಒ.*4* ಎಂದು ಗುರುತಿಸಲಾಗಿದೆ. ಸಾಕ್ಷಿ ಗುರುತಿಸಿದ ಫೈರ್ ಆಗಿರುವ *2* ಕಾರ್ಟೇಜ್‌ಗಳು, ಲೈವ್ ಕಾರ್ಟೇಜ್, ರಕ್ತವಾದ ಮಣ್ಣು, ರಕ್ತವಾದ ಕಲ್ಲು, ಸಾದಾ ಮಣ್ಣು, ನೋಕೀಯಾ ಮೊಬೈಲ್, ಬಂದೂಕಿನ ಪ್ಯಾಡ್, ಇನ್ನೊಂದು ಪ್ಯಾಡ್, ಕುಮಾರನ ಒಂದು ಜೊತೆ ಚಪ್ಪಲಿಗಳನ್ನು ಕ್ರಮವಾಗಿ ಈಗ ಎಂ.ಒ.*5* ರಿಂದ ಎಂ.ಒ.*13* ಎಂದು ಗುರುತಿಸಲಾಯಿತು.

*9.* ನನ್ನ ಅಣ್ಣ – ಕುಮಾರನ ಘಟನೆಯ ವೇಳೆಯಲ್ಲಿ ಧರಿಸಿದ್ದ ರಕ್ತವಾದ ಒಂದು ಟೀ ಶರ್ಟ್ ಮತ್ತು ಅಂಡರ್‌ವೇರ್‌ನ್ನು ಮರುದಿನ ಆರ್ ಆರ್ ಆಸ್ಪತ್ರೆಯ ಹತ್ತಿರ ಪೊಲೀಸರಿಗೆ ಕೊಟ್ಟೆನು. ಆ ಸಮಯದಲ್ಲಿ ಮುತ್ತನಾಯಕ ಮತ್ತು ರಾಮನಾಯಕ ಎನ್ನುವವರು ಹಾಜರಿದ್ದರು. ಸದರಿ ಬಟ್ಟೆಗಳನ್ನು ಪೊಲೀಸರು ಸಂಜೆ *5* ರಿಂದ *6.30* ಗಂಟೆಯವರೆಗೆ ಮಹಜರ ಮಾಡಿ ವಶಪಡಿಸಿಕೊಂಡರು. ಸಾಕ್ಷಿ ಗುರುತಿಸಿದ ಅಮಾನತ್ತು ಮಹಜರನ್ನು ಈಗ ನಿಪಿ.*6* ಎಂತಲೂ ಸಾಕ್ಷಿಯ ಸಹಿಯನ್ನು ಈಗ ನಿಪಿ.*6*(ಎ) ಎಂದು ಗುರುತಿಸಲಾಯಿತು.

*10.* ಆರೋಪಿಯ ಅಣ್ಣ-ತಮ್ಮಂದಿರ ಲಕ್ಷ್ಮನಾಯಕ, ಸೀನನಾಯಕ, ಕೆಂಪನಾಯಕ ಘಟನೆಯ ವೇಳೆಯಲ್ಲಿ ಹಾಜರಿರಲಿಲ್ಲ ಎಂದು ನಾನು ಪೊಲೀಸರ ಮುಂದೆ ಮರುಹೇಳಿಕೆ ನೀಡಿದ್ದೇನೆ.

***(ಈ ಹಂತದಲ್ಲಿ ಸದರಿ ಸಾಕ್ಷಿಯು ಅಭಿಯೋಜನ ಪಕ್ಷದ ಪ್ರಕರಣಕ್ಕೆ ಅನುಗುಣವಾಗಿ ಸಾಕ್ಷ್ಯ ನುಡಿಯುತ್ತಿಲ್ಲವಾದ ಕಾರಣ ಆತನನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದರ ಮೇರೆಗೆ ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಅಭಿಯೋಜಕರ ಪಾಟೀ ಸವಾಲಿಗೆ ಅನುಮತಿ ನೀಡಲಾಗಿದೆ.)***

**<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದ ಃ</u>**

*11.* ನನ್ನ ಅಣ್ಣ – ಕುಮಾರನ ಧರಿಸಿದ್ದ ಬಟ್ಟೆಗಳನ್ನು ನಾನು ಠಾಣೆಗೆ ತಂದು ಹಾಜರುಪಡಿಸಿದೆನು, ಅವುಗಳನ್ನು ಪೊಲೀಸರು ಸಂಜೆ *6* ರಿಂದ *6.45* ರವರೆಗೆ ಮಹಜರ ಮಾಡಿ ವಶಪಡಿಸಿಕೊಂಡರು ಅಂದರೆ ಸರಿ.

**<u>ಪಾಟೀ ಸವಾಲುಃ</u>**

***(ಆರೋಪಿ ಪರ ವಕೀಲರು ಕೆಲವೊಂದು ದಾಖಲೆಗಳನ್ನು ಸಂಬಂಧಪಟ್ಟ ಪೊಲೀಸರು ಚಾರ್ಜ್ ಶೀಟ್‌ನೊಂದಿಗೆ ಕೊಟ್ಟಿಲ್ಲವೆಂದು ಪಾಟೀ ಸವಾಲು ಮಾಡಲು ಸಮಯಾವಕಾಶ ಕೋರಿರುತ್ತಾರೆ. ಪಾಟೀ ಸವಾಲನ್ನು ಖರ್ಚು ಕೊಡುವ ನಿಬಂಧನೆಗೆ ಒಳಪಟ್ಟು ಮುಂದೂಡಲಾಯಿತು.)***

***<u>(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).</u>***

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.

(ನಿಂಗಪ್ಪ ಪರಶುರಾಮ ಕೋಪರ್ಡೆ)
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ರಾಮನಗರ.**

**ದಿನಾಂಕ ಃ** ***06.04.2023***
**ಸಾಕ್ಷಿಗೆ ಪ್ರಮಾಣ ಮಾಡಿಸಲಾಯಿತು.**

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ.ಡಿಜಿ., ವಕೀಲರಿಂದಃ</u>**

*12.* ಘಟನೆಗಿಂತ ಮೊದಲು ಆಟೋ ಮೊಬೈಲ್ ಅಂಗಡಿಗೆ ಹೋಗುತ್ತಿದ್ದೆನು. ಕೋವಿಡ್ - *19* ಕಾಲದಲ್ಲಿ ಆ ಕೆಲಸ ಬಿಟ್ಟು ಈಗ ಕೋಳಿ ಅಂಗಡಿ ಇಟ್ಟುಕೊಂಡಿದ್ದೇನೆ.

*13.* ಘಟನೆಗಿಂತ ಮೊದಲು ಚಾಸಾ.*2* - ಕುಮಾರ ಮೆಡಿಕಲ್ ಡಿಸ್ಟ್ರಿಬ್ಯೂಷನ್‌ನಲ್ಲಿ ಕೆಲಸ ಮಾಡುತ್ತಿದ್ದರು ಅಂದರೆ ಸರಿ. ಅವರ ಹೆಂಡತಿ ಆರ್ ಆರ್ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದಾರೆ ಅಂದರೆ ಸರಿ.

*14.* ದೂರು ನೀಡಬೇಕಾದರೆ ಯಾವ ಊರಿನ ಸರ್ವೆ ನಂಬರಿನಲ್ಲಿ ಘಟನೆಯಾಗಿದೆ ಎಂದು ಹೇಳಿದ್ದೀರಾ ಅಂದರೆ ಕೋಲೂರು ಸರ್ವೆ ನಂ.*59* ರಲ್ಲಿ ಘಟನೆಯಾಗಿದೆ ಎಂದು ಹೇಳಿದ್ದೇನೆ. ದೂರು ನೀಡಬೇಕಾದರೆ ಜಮೀನಿಗೆ ಸಂಬಂಧಪಟ್ಟ ಪಹಣಿ ಕೊಟ್ಟಿದ್ದೀರಾ ಅಂದರೆ ಇಲ್ಲ. ಆದರೆ ಮಂಜೂರಾತಿ ಆದೇಶವನ್ನು ಪೊಲೀಸರಿಗೆ ನೀಡಿದ್ದೇನೆ.

*15.* ದೂರು ಕೊಡಬೇಕಾದರೆ ಕೋಲೂರು ಸರ್ವೆ ನಂ.*57* ಎಂದು ಹೇಳಿದ್ದೇನೆ ಅಂದರೆ ಸರಿ. ಸದರಿ ಜಮೀನು ನನ್ನ ತಾತನಿಗೆ ಮಂಜುರಾಗಿತ್ತು, ಅದರಲ್ಲಿ ನಾವು ಮತ್ತು ಆರೋಪಿ ಅರ್ಧ ಅರ್ಧ ಭಾಗ ವಿಭಾಗ ಮಾಡಿಕೊಂಡಿದ್ದೇವೆ ಎಂದು ದೂರಿನಲ್ಲಿ ಹೇಳಿದ್ದೀರಾ ಅಂದರೆ ಹೇಳಿದ್ದೇನೆ.

*16.* ಪೂರ್ವ ದಿಕ್ಕಿನ ಕಡೆ ಮುಖ ಮಾಡಿಕೊಂಡು ನಿಂತರೆ ಎಡ ಭಾಗದ ಜಮೀನು ನಮ್ಮದು, ಮತ್ತು ಬಲಭಾಗದ ಜಮೀನು ಆರೋಪಿ ಸಾಗುವಳಿ ಮಾಡುತ್ತಿದ್ದನು.

*17.* ಘಟನೆಯ ದಿನ ಗಲಾಟೆಯಾದ ಜಮೀನು ಯಾರ ಭಾಗದ್ದು ಎಂದು ಹೇಳಿದ್ದೀರಾ ಅಂದರೆ ನಮ್ಮ ಭಾಗಕ್ಕೆ ಬಂದ ಜಮೀನಿನಲ್ಲಿ ಗಲಾಟೆಯಾಗಿರುತ್ತದೆ. ಯಾವ ಕಡೆ ಮುಖ ಮಾಡಿಕೊಂಡು ಸತ್ತೆ ಆಯುತ್ತಿದ್ದಿರಿ ಅಂದರೆ ನನಗೆ ದಿಕ್ಕುಗಳು ಗೊತ್ತಾಗುವುದಿಲ್ಲ. ನೀವು ಸೂರ್ಯ ಹುಟ್ಟುವ ದಿಕ್ಕಿಗೆ ಮುಖ ಮಾಡಿಕೊಂಡು ಸತ್ತೆ ಆಯುತ್ತಿದ್ದಿರಾ ಅಂದರೆ ಗೊತ್ತಿಲ್ಲ.

*18.* ನಾವು ಸತ್ತೆ ಆಯುವಾಗ ಮಧ್ಯೆ ನನ್ನ ಅಣ್ಣ - ಕುಮಾರ ಇದ್ದನು, ನಾನು ಕುಮಾರನ ಬಲಕ್ಕೆ ನಾನು ಇದ್ದೆ, ಅವನ ಎಡಕ್ಕೆ ಲಕ್ಷ್ಮಣ್ ಇದ್ದನು. ನಾವು ಸ್ವಲ್ಪ ಹಿಂದೆ ಮುಂದೆ ಇದ್ದೆವು. ಆರೋಪಿ ಹಿಂದೆಯಿಂದ ಬಂದನು.

*19.* ಆರೋಪಿ ಕಾರನ್ನು ಸುಮಾರು *10-15* ಅಡಿ ದೂರದಲ್ಲಿ ನಿಲ್ಲಿಸಿದ್ದನು. ಆರೋಪಿ ಸೂರ್ಯ ಮುಳಗುವ ಕಡೆ ಬಂದನೋ, ಹುಟ್ಟುವ ಕಡೆ ಬಂದನೋ ಗೊತ್ತಿಲ್ಲ. ಒಟ್ಟಿನಲ್ಲಿ ಹಿಂದೆಯಿಂದ ಬಂದ.

*20.* ಗುಂಡು ಹಾರಿಸಿದ ನಂತರ ನನ್ನ ಅಣ್ಣ - ಕುಮಾರ ಗುಂಡೇಟಿನಿಂದ ಬಿದ್ದ ಮೇಲೆ ಜನ ಶಬ್ದ ಕೇಳಿ ಜನ ಬಂದರು. ಪಂಚಾಯತಿ ಮಾಡಿಸೋಣ ಎಂದು

ಹೇಳಿದ್ದೆವು ಎಂದು ದೂರಿನಲ್ಲಿ ಹೇಳಿದ್ದೇನೆ. ನಾವು ಯಾವುದೇ ಪಂಚಾಯತಿ ಮಾಡಿಸದೇ ಆರೋಪಿಯ ಜಮೀನಿಗೆ ಹೋಗಿ ಸತ್ತೆ ಆಯಲಿಕ್ಕೆ ಹೋದೆವು ಅಂದರೆ ಸರಿಯಲ್ಲ. ಆಗ ಆರೋಪಿ ನಮ್ಮ ಜಮೀನಿನಲ್ಲಿ ಯಾಕೆ ಸತ್ತೆ ಆಯುತ್ತಿದ್ದೀರಾ ಎಂದು ಕೇಳಿದನು ಅಂದರೆ ಸರಿಯಲ್ಲ. ಆಗ ನಾವು ಮೂರು ಜನ ಸೇರಿಕೊಂಡು ಆರೋಪಿಗೆ ಹೊಡೆದೆವು ಅಂದರೆ ಸರಿಯಲ್ಲ. ಆ ಬಗ್ಗೆ ಆರೋಪಿಯ ದೂರಿನ ಆಧಾರದ ಮೇರೆಗೆ ಕ್ರೈಂ ನಂ.*213/19* ರಲ್ಲಿ ನಮ್ಮ ವಿರುದ್ಧ ದೂರು ದಾಖಲಾಗಿದೆ ಅಂದರೆ ಸರಿ. ಆದರೆ ನಾವು ಹಲ್ಲೆ ಮಾಡಿಲ್ಲ. ಪೊಲೀಸರು ವಿಚಾರಿಸಿದಾಗ ನಾವು ಹಲ್ಲೆ ಮಾಡಿಲ್ಲ ಎಂದು ತಿಳಿಸಿದ್ದೆವು.

***(ಆರೋಪಿ ಪರ ವಕೀಲರು ತಮ್ಮ ಆರೋಗ್ಯ ಸರಿಯಿಲ್ಲದ ಕಾರಣ ಸಮಯಾವಕಾಶ ನೀಡಬೇಕೆಂದು ವಿನಂತಿಸಿಕೊಂಡಿದ್ದರಿಂದ ಪಾಟೀ ಸವಾಲು ಮುಂದೂಡಲಾಯಿತು.)***

***(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).***

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.

(ನಿಂಗಪ್ಪ ಪರಶುರಾಮ ಕೋಪರ್ಡೆ)
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ರಾಮನಗರ.**

ದಿನಾಂಕಃ

*21.*

<u>**ಮರುವಿಚಾರಣೆಃ ಇಲ್ಲ.**</u>
<u>**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).**</u>

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.

(ನಿಂಗಪ್ಪ ಪರಶುರಾಮ ಕೋಪರ್ಡೆ)
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ರಾಮನಗರ.**